MR. SPEAKER.—We have not received them. Anyway, you read it. Let the house knows it.

(At this stage Hon'ble Minister read the answers for an information of the House)

ಶ್ರೀ ಬಾದರಲಿ ಹಂಪನಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಲ್ಲಿ ಹಿಂದೆ ೧೯೮೫–೮೬ರಲ್ಲಿ ಸತತವಾಗಿ ಮೂರು ವರ್ಷ ಯಾರು ಕೆಲಸ ಮಾಡಿದ್ದಾರೆ ಅವರಿಗೆ ನಿಗಮದಲ್ಲಿ ದಿನಗೂಲಿ ಮೇಲೆ ಖಾಯಂ ಆಗಿ ನೌಕರಿಯನ್ನು ಕೊಟ್ಟಿದ್ದರು. ಆದರೆ ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಆದೇಶ ಇದ್ದರೂ ಕೂಡಾ ದಿನಗೂಲಿ ನೌಕರರನ್ನು ಖಾಯಂ ಮಾಡಿಲ್ಲ ದಿನಗೂಲಿ ನೌಕರರಿಗೆ ಖಾಯಂ ನೌಕರಿ ಕೊಟ್ಟಿಲ್ಲ ಎಂಬ ಭಾವನೆ ಅಲ್ಲಿನ ನೌಕರರಲ್ಲಿ ಇದೆ ಇದಕ್ಕೆ ಸರಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಸರ್ವೋಚ್ಚ ನ್ಯಾಯಾಲಯದ ತೀರ್ಪು ಈ ನಿಗಮದ ನೌಕರರಿಗೆ ಅನ್ವಯವಾಗುವುದಿಲ್ಲ. ಈ ತೀರ್ಪು ಸರಕಾರದ ನೌಕರರಿಗೆ ಮಾತ್ರ ಅನ್ವಯವಾಗುತ್ತದೆ. ಎರಡನೆಯದಾಗಿ, ೧೯೮೬ನೇ ಇಸವಿವರೆಗೆ ನೇಮಕ ಮಾಡಿದಂಥ ಆಹಾರ ನಿಗಮದ ನೌಕರರನ್ನು ಈಗಾಗಲೇ

೧೦.೨೦. ಎ.ಎಂ.

ಖಾಯಂ ಮಾಡಲಾಗಿದೆ. ೧೯೮೬ರ ಮೇಲೆ ನೇಮಕವಾದುದರ ಬಗ್ಗೆ ಹೇಳುವುದಾದರೆ, ಆಗ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇತ್ತು, ಮತ್ತು ಅವರು ಯಾವ ಆಧಾರದ ಮೇಲೆ ನೇಮಕ ಆಗಿದ್ದಾರೆ ಇವೆಲ್ಲವನ್ನು ಸರ್ಕಾರ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ದಿನಗೂಲಿ ನೌಕರರನ್ನು ಖಾಯಂ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಸುಪ್ರೀಂ ಕೋರ್ಟಿನಲ್ಲಿ ಒಂದು ನಿರ್ಣಯ ಆಗಿದೆ. ಯಾರು ೨೪೦ ದಿವಸ ದಿನಗೂಲಿ ಮೇಲೆ ಕೆಲಸ ಮಾಡಿರುತ್ತಾರೋ ಅಂತಹವರನ್ನು ಸರ್ಕಾರ ಖಾಯಂ ಮಾಡಿಕೊಳ್ಳಬೇಕೆಂದು ನಿರ್ಣಯ ಆಗಿದೆ. ಆದರೆ ಮಾನ್ಯ ಸಚಿವರು ನಿಗಮದಲ್ಲಿ ಕೆಲಸ ಮಾಡುವವರಿಗೆ ಇದು ಅನ್ವಯವಾಗುವುದಿಲ್ಲವೆಂದು ಹೇಳಿದರು. ಸರ್ಕಾರದಲ್ಲಿ ಒಂದೇ ನೀತಿ ಆಗಿರಬೇಕು. ಇಲ್ಲಿ ಕೆಲಸ ಮಾಡುವವರಿಗೆ ಒಂದು ನೀತಿ, ಕಾರ್ಪೊರೇಷನ್‌ಗಳಲ್ಲಿ ಕೆಲಸ ಮಾಡುವವರಿಗೆ ಒಂದು ನೀತಿ ಇರುವುದು ಸರಿಯಲ್ಲ. ಅವರು ಒಂದು ಸರ್ಕಾರಿ ನಿಗಮದಲ್ಲಿ ಸೇವೆ ಮಾಡಿದ್ದಾರೆ ಅವರನ್ನು ಉಳಿದ ದಿನಗೂಲಿ ನೌಕರರಂತೆ ಖಾಯಂ ಮಾಡಿಕೊಳ್ಳಲಿಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಈ ಪ್ರಶ್ನೆಗಳಿಗೆ ಆಗಲೆ ಉತ್ತರ ಕೊಟ್ಟಿದ್ದಾರೆ.

ಹಸಿರು ಕಾರ್ಡುಗಳ ವಿತರಣೆ

೫೫೦ (೧೧೩೮) ಶ್ರೀ ಮಂಜುನಾಥ ಚ. ಕುನ್ನೂರ, (ಶಿಗ್ಗಾಂವ). —ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗ್ರಾಮಾಂತರ ಪ್ರದೇಶದಲ್ಲಿ ಪಡಿತರ ವಸ್ತುಗಳನ್ನು ಹಂಚಲು ಹಸಿರು ಕಾರ್ಡು ಹಂಚುವಾಗ ಬಡವರಿಗೆ ಹಸಿರು ಕಾರ್ಡು ಸರಿಯಾಗಿ ವಿತರಣೆಯಾಗದಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಹಸಿರು ಕಾರ್ಡುಗಳನ್ನು ಯಾವ ಆಧಾರದ ಮೇಲೆ ಹಾಗೂ ಯಾವ ವರ್ಗದ ಅಧಿಕಾರಿಗಳು ಈ ಕಾರ್ಡುಗಳನ್ನು ಹಂಚಿರುತ್ತಾರೆ ?

ಇ) ಅನಧಿಕೃತವಾಗಿ ಶ್ರೀಮಂತರು ಪಡೆದುಕೊಂಡ ಕಾರ್ಡುಗಳನ್ನು ರದ್ದುಪಡಿಸಲು ಹಾಗೂ ಕಡುಬಡತನದಿಂದ ಬಳಲುತ್ತಿರುವ ಜನರಿಗೆ ಪುನಃ ಹಸಿರು ಕಾರ್ಡು ಹಂಚಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಹೌದು.

ಆ) ವಾರ್ಷಿಕ ಆದಾಯ ರೂ.೩೫೦೦–೦೦ ರೊಳಗೆ ಇರುವ ಎಲ್ಲಾ ಗ್ರಾಮಾಂತರ ಹಾಗೂ ೨೦,೦೦೦ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪಟ್ಟಣ ಪ್ರದೇಶದಲ್ಲಿ ಇರುವ ಎಲ್ಲಾ ಕುಟುಂಬಗಳು, ಭೂರಹಿತ ಕೃಷಿ ಕಾರ್ಮಿಕರು, ಪ್ಲಾಂಟೇಷನ್ ಕಾರ್ಮಿಕ ಕುಟುಂಬಗಳು, ಗ್ರಾಮಾಂತರ ಕುಶಲ ಕರ್ಮಿಗಳು, ಸಣ್ಣ–ಮಧ್ಯಮ ಹಿಡುವಳಿದಾರರು ಮತ್ತು ಸರ್ಕಾರದಿಂದ ಪೆನ್‌ಷನ್ ಪಡೆಯುತ್ತಿರುವ, ವೃದ್ಧಾಪ್ಯ ಅಂಗವಿಕಲ ಹಾಗೂ ವಿಧವಾ ವೇತನಗಳನ್ನು ಪಡೆಯುತ್ತಿರುವ ಕುಟುಂಬಗಳು, ಹಸಿರು ಕಾರ್ಡ್‌ನ್ನು ಪಡೆಯಲು ಅರ್ಹರಾಗಿರುತ್ತಾರೆ. ರಾಜ್ಯದಲ್ಲಿರುವ ತಾಲ್ಲೂಕು ತಹಶೀಲ್ದಾರ್‌ರವರು ಅವರ ಹಿಬ್ಬಂದಿ ಮೂಲಕ ಹಸಿರು ಕಾರ್ಡ್‌ಗಳನ್ನು ಈ ಹಿಂದೆ ವಿತರಣೆ ಮಾಡಿರುತ್ತಾರೆ. ಈಗ ಹಸಿರು ಪಡಿತರ ಚೀಟಿಗಳನ್ನು ಜಿಲ್ಲಾ ಪರಿಷತ್‌ನವರು ವಿತರಣೆ ಮಾಡುತ್ತಾರೆ.

ಇ) ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದ್ದು ಇದುವರೆಗೆ ೩೫,೭೧೦ ಅನರ್ಹ ಕುಟುಂಬಗಳಿಗೆ ವಿತರಿಸಿದ ಹಸಿರು ಕಾರ್ಡುಗಳನ್ನು ರದ್ದುಪಡಿಸಿ, ಅರ್ಹ ೧೨,೪೦೫ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ವಿತರಿಸಲಾಗಿರುತ್ತದೆ.

ಶ್ರೀ ಎಂ. ಸಿ. ಕುನ್ನೂರ್.—ಮಾನ್ಯ ಅಧ್ಯಕ್ಷರೇ, ಹಸಿರು ಕಾರ್ಡ್‌ಗಳನ್ನು ಹಂಚುವಾಗ ಬಡವರಿಗೆ ಅನ್ಯಾಯವಾಗಿರತಕ್ಕಂಥಾದ್ದು ನಿಜ ಎಂದು ಸರ್ಕಾರ ಒಪ್ಪಿಕೊಂಡಿದೆ ಆದರೆ ನಾವು ಹಳ್ಳಿಗಳಿಗೆ ಹೋದಾಗ ಪ್ರತಿಯೊಬ್ಬರೂ ಹಸಿರು ಕಾರ್ಡ್ ಹಂಚಬೇಕೆಂದು ನಮ್ಮನ್ನು ಕೇಳುತ್ತಿದ್ದಾರೆ. ನಮಗೆ ಗರಿಬಿ ಹಠಾವೋ ಕಾರ್ಯಕ್ರಮದಲ್ಲಿ ಸಂಬಿಕೆ ಇರುವಾಗ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೮ ತಿಂಗಳಾದರೂ ಕೂಡ ಇವತ್ತಿನವರೆಗೆ ಹಸಿರು ಕಾರ್ಡ್‌ಗಳ ವಿತರಣೆಯನ್ನು ಸರಿ ಮಾಡುವುದಕ್ಕೆ ಆಗಲಿಲ್ಲ. ಈ ಹಸಿರು ಕಾರ್ಡ್‌ಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಯಾವ ರೀತಿಯಲ್ಲಿ ತಾವು ಹಂಚುತ್ತೀರಿ ಮತ್ತು ಇದನ್ನು ತಾವು ಯಾವ ರೀತಿ ಸರಿ ಮಾಡುತ್ತೀರಿ ? ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಮಂತ್ರಿಗಳ ಬೇಡಿಕೆ ಬಂದಾಗ ಈ ವಿಷಯದ ಬಗ್ಗೆ ಒಂದು ಸ್ಪಷ್ಟವಾದ ನೀತಿ ಮತ್ತು ಏನು ಕಾರ್ಯಕ್ರಮ ಜಾರಿ ಗೊಳಿಸುತ್ತಾರೆ ಎನ್ನುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಒಂದು ಹೊಸ ನೀತಿಯನ್ನು ರೂಪಗೊಳಿಸಲಾಗುತ್ತದೆ. ಸದ್ಯದಲ್ಲಿಯೇ ಅವರು ಇದನ್ನು ಸರಿ ಮಾಡುತ್ತಾರೆ

ಪಡಿತರ ವಸ್ತುಗಳ ವಿತರಣೆಯಲ್ಲಿ ಕಡಿತ

೫೫೧ (೧೨೭೨) ಶ್ರೀ ಹರ್ಷಕುಮಾರ ಗೌಡ (ಚಾಮರಾಜ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ನಗರದ ನಾಗರೀಕರಿಗೆ ಪಡಿತರ ವಸ್ತುಗಳಾದ ಸಕ್ಕರೆ, ತಾಳಿಎಣ್ಣೆ ಮತ್ತು ಗೋಧಿಯ ಪ್ರಮಾಣದಲ್ಲಿ ಕಡಿತಗೊಳಿಸಿರುವುದು ಸರ್ಕಾರಕ್ಕೆ ತಿಳಿದಿದೆಯೆ ?

ಆ) ಹಾಗಿದ್ದಲ್ಲಿ, ಅದನ್ನು ಹೆಚ್ಚುವರಿ ಮಾಡಲು ಸರಕಾರ ಕೈಗೊಂಡ ಕ್ರಮಗಳೇನು ?

ಇ) ಕಳಪೆದರ್ಜೆಯ ಅಕ್ಕಿ, ಗೋಧಿ ವಿತರಣೆ ಮಾಡುತ್ತಿರಲು ಕಾರಣವೇನು ?

ಈ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂದೀಯ ವ್ಯವಹಾರಗಳ ಸಚಿವರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ).—

ಅ) ಇಲ್ಲ. ಬದಲಾಗಿ ಏರಿಕೆ ದಿಸೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಭಾರತ ಆಹಾರ ನಿಗಮದವರು ಕೆಲವು ಸಲ ಕಳಪೆ ದರ್ಜೆಯ ಆಹಾರ ಧಾನ್ಯಗಳನ್ನು ಪೂರೈಸಿದ ಸಂದರ್ಭಗಳನ್ನು ಹೊರತು ಪಡಿಸಿ ಸಾಮಾನ್ಯವಾಗಿ ಉತ್ತಮ ದರ್ಜೆಯ ಅಕ್ಕಿ ಮತ್ತು ಗೋಧಿಯನ್ನು ಸಾರ್ವಜನಿಕ ವಿತರಣಾ ಯೋಜನೆಯಡಿಯಲ್ಲಿ ಪೂರೈಸಲಾಗುತ್ತಿದೆ.

ಈ) ಭಾರತ ಆಹಾರ ನಿಗಮದವರಿಗೆ ಉತ್ತಮ ದರ್ಜೆ ಅಕ್ಕಿಯನ್ನು ಸರಬರಾಜು ಮಾಡಲ್ಲ ಕೋರಲಾಗಿದೆ. ಸಗಟು ವ್ಯಾಪಾರಿಗಳಾರರು ಸದರೀ ನಿಗಮದ ಗೋಡಾನುಗಳಿಂದ ಅಕ್ಕಿಯನ್ನು